ಕರ್ನಾಟಕ ಸರ್ಕಾರ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಪರ ಆಯುಕ್ತರ ಕಛೇರಿ,
ಐವಾನ–ಎ–ಶಾಹಿ ಬಡಾವಣೆ, ಕಲಬುರಗಿ

ಸಂಖ್ಯೆ ಸಿ1(1) ಆಡಳಿತ ಸಿಬ್ಬಂದಿ ಪವ್ಯ ಬಡ್ತಿ/84/2013–14 ದಿನಾಂಕ 22.07.2015

## ಜ್ಞಾಪನ

ವಿಷಯ: ಕಲಬುರಗಿ ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಪತ್ರಾಂಕಿತ ವ್ಯವಸ್ಥಾಪಕರಿಗೆ, ಪತ್ರಾಂಕಿತ ಸಹಾಯಕರ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡುವ ಕುರಿತು

ಉಲ್ಲೇಖ: 1)ಸರ್ಕಾರದ ಆದೇಶ ಸಂಖ್ಯೆ ಇಡಿ 250 ಡಿಪಿಐ 2006 ದಿನಾಂಕ 22.02.2008
2)ಸರ್ಕಾರದ ಆದೇಶ ಸಂಖ್ಯೆ ಇಡಿ 464 ಡಿಪಿಐ 2008 ದಿನಾಂಕ 06.01.2009
3)ಈ ಕಛೇರಿ ಅಧಿಸೂಚನೆ ಸಂಖ್ಯೆ ಸಿ1(1) ಆಡಳಿತ ಸಿಬ್ಬಂದಿ ಪವ್ಯ ಬಡ್ತಿ/84/2013–14 ದಿನಾಂಕ 03.06.2015
4)ಸರಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 43 ಹೆಚ್‌ಕೆಸಿ 2013 ದಿನಾಂಕ 2.01.2014
5)ಈ ಕಚೇರಿಯ ಅಧಿಸೂಚನೆ ಸಂಖ್ಯೆ ಸಿ1(1) ಆಡಳಿತ ಹೂಕಮಿ 371(ಜೆ)/50/2014–15 ದಿನಾಂಕ 24.11.2014
6)ಸರಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 33 ಹೈಕು 2014 ದಿನಾಂಕ 10.04.2014
7)ದಿನಾಂಕ 15.07.2015 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭಾ ನಡುವಳಿ

===

ಉಲ್ಲೇಖ (3)ರ ಅಧಿಸೂಚನೆಯಲ್ಲಿ ಕಲಬುರಗಿ ವಿಭಾಗ ವ್ಯಾಪ್ತಿಯ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಾಂಕಿತ ವ್ಯವಸ್ಥಾಪಕರ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ. ಉಲ್ಲೇಖ (1) ರಿಂದ (6) ರಲ್ಲಿ ಪ್ರತ್ಯಾಯೋಜಿಸಿದ ಅಧಿಕಾರದಂತೆ, ಮತ್ತು ಮಾರ್ಗಸೂಚಿಗಳನ್ವಯ ಪ್ರಸ್ತುತ ವಿಭಾಗದಲ್ಲಿ ಖಾಲಿ ಇರುವ ಪತ್ರಾಂಕಿತ ಸಹಾಯಕರ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡಲು ನಿರ್ಧರಿಸಿ, ಪ್ರಚಲಿತ ಸರ್ಕಾರದ ನಿಯಮಗಳು, ಜೇಷ್ಠತೆ ಹಾಗೂ ಮಿಸಲಾತಿಯಂತೆ ಅರ್ಹತೆ ಹೊಂದಿದ ಅನುಬಂಧದಲ್ಲಿ ತೋರಿಸಿದ ಪತ್ರಾಂಕಿತ ವ್ಯವಸ್ಥಾಪಕರನ್ನು ರೂ. 22800–43200 ವೇತನ ಶ್ರೇಣಿಯಲ್ಲಿ ಪತ್ರಾಂಕಿತ ಸಹಾಯಕರ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡಿ, ಈ ಕೆಳಗಿನ ಷರತ್ತುಗೊಳಪಟ್ಟು, ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

ಷರತ್ತುಗಳು:

1) ಈ ಆದೇಶ ತಲುಪಿದ 15 ದಿನಗಳ ಒಳಗಾಗಿ ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿರುವ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗುವುದು ತಪ್ಪಿದ್ದಲ್ಲಿ ನಿಯಮಾನುಸಾರ ಬಡ್ತಿಯನ್ನು ರದ್ದುಪಡಿಸಲಾಗುವುದು.
2) ಅನುಬಂಧದಲ್ಲಿರುವ ನೌಕರರು ಪತ್ರಾಂಕಿತ ಸಹಾಯಕರ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಕರ್ನಾಟಕ ನಾಗರಿಕ ಸೇವಾ ನಿಯಮ 42(ಬಿ) ರನ್ವಯ ವೇತನ ನಿಗದಿಗೆ ಅರ್ಹರಿರುತ್ತಾರೆ.

3) ನಿಗದಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳನ್ನು ತೇರ್ಗಡೆ ಹೊಂದಿರುವ ಬಗ್ಗೆ ಕಛೇರಿಯ ಮುಖ್ಯಸ್ಥರು ಸೂಕ್ತ ದಾಖಲೆಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.

4) ಈ ಅಧಿಕಾರಿಗಳ ಮೇಲೆ ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ, ನ್ಯಾಯಾಂಗ ಪ್ರಕರಣ ಬಾಕಿ ಇರುವಂತಿಲ್ಲ. ಸದರಿ ಹುದ್ದೆಯಿಂದ ಬಿಡುಗಡೆ ಮಾಡುವ ಮುನ್ನ ಇದನ್ನು ಖಚಿತಪಡಿಸಿಕೊಳ್ಳುವುದು.

5) ಮೇಲಿನ ಎಲ್ಲಾ ಷರತ್ತುಗಳಮ್ನು ಕಡ್ಡಾಯವಾಗಿ ಪಾಲಿಸಿರತಕ್ಕದ್ದು, ಈ ಷರತ್ತುಗಳು ಪೂರೈಕೆ ಆಗದಿದ್ದಂತಹ ಅಧಿಕಾರಿಗಳನ್ನು ಸ್ಥಾನಪನ್ನ ಬಡ್ತಿಗೆ ಪರಿಗಣಿಸಬಾರದೆಂದು ಸ್ಪಷ್ಟಪಡಿಸಿದೆ.

6) ಪತ್ರಾಂಕಿತ ಸಹಾಯಕರ ಹುದ್ದೆಗೆ ಬಡ್ತಿ ನೀಡುವಾಗ ತಪ್ಪಾಗಿ ಮಾಹಿತಿಯನ್ನು ನೀಡಿದ್ದಲ್ಲಿ ಯಾವುದೇ ಮೂನ್ಸೂಚನೆ ಇಲ್ಲದೇ ಬಡ್ತಿಯನ್ನು ಹಿಂಪಡೆಯಲಾಗುವುದು.

( ರಾಧಾಕೃಷ್ಣರಾವ ಮದನಕರ್)
ಅಪರ ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಗಳನ್ನು

1) ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು-1
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1
2) ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು / ಧಾರವಾಡ
3) ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ ಲಲಿತ ಮಹಲ್ ರಸ್ತೆ, ಮೈಸೂರು
4) ಕಲಬುರಗಿ ವಿಭಾಗದ ಎಲ್ಲಾ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
5) ಪ್ರಾಂಶುಪಾಲರು, ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ ಕಲಬುರಗಿ
6) ಕಲಬುರಗಿ ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ.
7) ಕಲಬುರಗಿ ವಿಭಾಗದ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರಿಗೆ.
8) ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
9) ಸಂಬಂಧಿಸಿದ ಸಂಸ್ಥೆ / ಕಛೇರಿ ಮುಖ್ಯಸ್ಥರಿಗೆ
10) ಕಛೇರಿಯ ಆಯುಕ್ತರ / ನಿರ್ದೇಶಕರ / ಸಹ ನಿರ್ದೇಶಕರು (ಆಡಳಿತ) ರವರ ಆಪ್ತ ಶಾಖೆಗೆ.
11) ಸಂಬಂಧಿಸಿದ ಅಧಿಕಾರಿ/ ನೌಕರರರಿಗೆ.
12) ಕಛೇರಿ ಪ್ರತಿ

ಕರ್ನಾಟಕ ಸರ್ಕಾರ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಪರ ಆಯುಕ್ತರ ಕಛೇರಿ,
ಐವಾನ–ಎ–ಶಾಹಿ ಬಡಾವಣೆ, ಕಲಬುರಗಿ

ಸಂಖ್ಯೆ ಸಿ1(1) ಆಡಳಿತ ಸಿಬ್ಬಂದಿ ಪವ್ಯ ಬಡ್ತಿ/84/2013–14 ದಿನಾಂಕ 22.07.2015

ಅನುಬಂಧ

ಕಲಬುರಗಿ ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಾಂಕಿತ ವ್ಯವಸ್ಥಾಪಕರಿಗೆ, ಪತ್ರಾಂಕಿತ ಸಹಾಯಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿದ ಪಟ್ಟಿ

| ಕ್ರ. ಸಂ | ಅಧಿಕಾರಿಯ ಹೆಸರು, ಮತ್ತು ಕಾರ್ಯನಿರ್ವಹಿಸುತ್ತಿರುವ ವಿಳಾಸ | ಪತ್ರಾಂಕಿತ ಸಹಾಯಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿರುವ ಕಛೇರಿ ವಿಳಾಸ | ಷರಾ |
|---|---|---|---|
| 1 | 2 | 3 | 4 |
| 01 | ಶ್ರೀ ಹಣಮಂತ ಮೋರೆ,<br>ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ,<br>ಹುಮನಾಬಾದ ಜಿಲ್ಲೆ ಬೀದರ | ಆಯುಕ್ತರ ಕಚೇರಿ,<br>ಸಾರ್ವಜನಿಕ ಶಿಕ್ಷಣ ಇಲಾಖೆ,<br>ಕಲಬುರಗಿ | ಸ್ಥಳೀಯ ವೃಂದ |
| 02 | ಶ್ರೀ ಬಿ.ಎಸ್. ಪಟ್ಟಣಶೆಟ್ಟಿ<br>ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ,<br>ಮಾನ್ವಿ, ಜಿಲ್ಲೆ ರಾಯಚೂರ | ಉಪ ನಿರ್ದೇಶಕರ ಕಚೇರಿ,<br>ಸಾರ್ವಜನಿಕ ಶಿಕ್ಷಣ ಇಲಾಖೆ,<br>ರಾಯಚೂರು | ಸ್ಥಳೀಯ ವೃಂದ |
| 03 | ಶ್ರೀ ಮಲ್ಲಣ್ಣ ಮಡಿವಾಳ,<br>ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ,<br>ಕಲಬುರಗಿ ಉತ್ತರ ವಲಯ | ಉಪ ನಿರ್ದೇಶಕರ ಕಚೇರಿ,<br>ಸಾರ್ವಜನಿಕ ಶಿಕ್ಷಣ ಇಲಾಖೆ,<br>ಕಲಬುರಗಿ | ಉಳಿದ ಮೂಲ ವೃಂದ |

( ರಾಧಾಕೃಷ್ಣರಾವ ಮದನಕರ್ )
ಅಪರ ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ